# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ: 26-11-2020 ರಂದು ನಡೆದ ವಾರ್ಡ್ ಸಂಖ್ಯೆ: 115 ವನ್ನಾರಪೇಟೆ ವಾರ್ಡಿನ ವಾರ್ಡ್ ಸಮಿತಿ ಸಭೆಯ ನಡಾವಳಿಗಳು

ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)ಪಿಆರ್/35/2020-21, ದಿನಾಂಕ: 21-09-2020 ರ ಆದೇಶದಂತೆ ದಿನಾಂಕ: 07-12-2020 ರಂದು ಕ್ಯನೋಪಿ ಹೋಟೆಲ್, ನೇತಾಜಿ ಸುಭಾಷ್ ಚಂದ್ರ ಬೋಸ್ ಕಟ್ಟಡ, ಎಂ.ಜಿ. ರಸ್ತೆ ಇಲ್ಲಿ ನಡೆದ ವಾರ್ಡ್ ಸಂಖ್ಯೆ: 115 ವನ್ನಾರಪೇಟೆ ವಾರ್ಡಿನ ವಾರ್ಡ್ ಸಮಿತಿ ಸಭೆಯ ನಡಾವಳಿಗಳು.

**ಸಭೆಗೆ ಹಾಜರಿದ್ದವರ ವಿವರಗಳು**

| ಸನ್ಮಾನ್ಯ ಶ್ರೀ. ಎನ್. ಎ. ಹ್ಯಾರೀಸ್ | | ಮಾನ್ಯ ಶಾಸಕರು, ಶಾಂತಿನಗರ ವಿಧಾನ ಸಭಾ ಕ್ಷೇತ್ರ |
|---|---|---|
| ಕ್ರ.ಸಂ | ಅಧಿಕಾರಿಗಳ ಹೆಸರು | ಪದನಾಮ |
| 1 | ಶ್ರೀ. ಆರ್. ಶಿವಕುಮಾರ್ | ಅಧ್ಯಕ್ಷಕರು ಮತ್ತು ನೋಡಲ್ ಅಧಿಕಾರಿಗಳು |
| 2 | ಆರ್ ಮಧು | ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ವಿಭಾಗ, ಬಿಬಿಎಂಪಿ |
| 3 | ಟಿ.ಡಿ. ಮಂಜುನಾಥ | ಸಹಾಯಕ ಕಾರ್ಯಪಾಲಕ ಅಭಿಯಂತರರು, ದೊಮ್ಮಲೂರು ಉಪ ವಿಭಾಗ, ಬಿಬಿಎಂಪಿ |
| 4 | ಶ್ರೀ. ಡಿ. ಮೂರ್ತಿ | ಸದಸ್ಯ ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ: 115 |
| 5 | ಶ್ರೀ. ಅಪ್ಪುರಾಜ್ | ಸಹಾಯಕ ಕಾರ್ಯಪಾಲಕ ಅಭಿಯಂತರರ, ಘನತ್ಯಾಜ್ಯ ನಿರ್ವಹಣೆ ಶಾಂತಿನಗರ ವಿಭಾಗ |
| 6 | ಶ್ರೀ ಚಂದ್ರಪ್ಪ ಕೆ ಬಿ | ಸಹಾಯಕ ಕಂದಾಯ ಅಧಿಕಾರಿಗಳು, ದೊಮ್ಮಲೂರು ಉಪ ವಿಭಾಗ ಮತ್ತು ಸಮಿತಿ ಸದಸ್ಯರು |
| 7 | ಶ್ರೀ ಟಿ.ಎಸ್. ನಾಗಪ್ಪ | ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ |
| 8 | ಶ್ರೀ ಕೆ ಎಸ್ ಚಿದಾನಂದ | ಕಿರಿಯ ಆರೋಗ್ಯ ಪರಿವೀಕ್ಷಕರು & ಸಮಿತಿ ಸದಸ್ಯರು ವಾರ್ಡ್ ಸಂಖ್ಯೆ: 115 |
| 9 | ಶ್ರೀಮತಿ. ಶೈಲಜ ಬಿ | ಸಹಾಯಕ ಕಂದಾಯ ಅಧಿಕಾರಿಗಳು (ಕಲ್ಯಾಣ) |
| 10 | ಶ್ರೀ. ಎಲ್. ಸಗಾಯನಾಥನ್ | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ: 115 |
| 11 | ಡಾ॥ ಚಿತ್ರ | ಆರೋಗ್ಯಾಧಿಕಾರಿಗಳು |
| 12 | ದೇವರಾಜ್ | ಅರಣ್ಯ ಇಲಾಖೆ, ಬಿಬಿಎಂಪಿ |
| 13 | ಶ್ರೀ. ಶ್ರೀನಿವಾಸ್ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ |
| 14 | ಅಜಯ್ ಎನ್ | ಸಹಾಯಕ ಅಭಿಯಂತರರು, ಬೆಸ್ಕಾಂ |
| 15 | ಕೆ ಶ್ರೀನಿವಾಸ್ | ಸಹಾಯಕ ಅಭಿಯಂತರರು, ಬೆಸ್ಕಾಂ |
| ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳ ವಿವರ | | |
| 16 | ಶ್ರೀಮತಿ . ಮಹಾಲಕ್ಷ್ಮಿ | ವಾರ್ಡ್ ಸಮಿತಿ ಸದಸ್ಯರು |
| 17 | ಶ್ರೀಮತಿ. ಶಿವಗಾಮಿ | ವಾರ್ಡ್ ಸಮಿತಿ ಸದಸ್ಯರು |
| 18 | ಥಾಮ | ವಾರ್ಡ್ ಸಮಿತಿ ಸದಸ್ಯರು |
| 19 | ಜಯ್ ಕುಮಾರ್ | ವಾರ್ಡ್ ಸಮಿತಿ ಸದಸ್ಯರು |

| | | |
|---|---|---|
| 20 | ವಿನೋದ್ | ವಾರ್ಡ್ ಸಮಿತಿ ಸದಸ್ಯರು |
| 21 | ಮುಸ್ತಫಾ | ವಾರ್ಡ್ ಸಮಿತಿ ಸದಸ್ಯರು |
| 22 | ಪ್ರಭಾಕರ್ | ವಾರ್ಡ್ ಸಮಿತಿ ಸದಸ್ಯರು |
| 23 | ಸುಬ್ರಮಣಿ | ವಾರ್ಡ್ ಸಮಿತಿ ಸದಸ್ಯರು (ಮಡಿವಾಳ ಮಾಚಿದೇವ ಅಸೋಸಿಯೇಷನ್) |
| 24 | ಡಾ॥ ಶೆಟ್ಟಿ | ವಾರ್ಡ್ ಸಮಿತಿ ಸದಸ್ಯರು (ಬಿ.ಡಿ.ಎ. ಅಸೋಸಿಯೇಷನ್) |

ದಿನಾಂಕ: 07-12-2020 ರಂದು ಸಂಜೆ 5-00 ಗಂಟೆಗೆ ವಾರ್ಡ್ ಸಂಖ್ಯೆ: 115 ವನ್ನಾರಪೇಟೆ ವಾರ್ಡ್ ವ್ಯಾಪ್ತಿಯ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಕ್ಯನೋಪಿ ಹೋಟೆಲ್, ನೇತಾಜಿ ಸುಭಾಷ್ ಚಂದ್ರ ಬೋಸ್ ಕಟ್ಟಡ, ಎಂ.ಜಿ. ರಸ್ತೆ ಇಲ್ಲಿ ನೆಡೆಸಲಾಯಿತು.

ಸಭೆಯ ಆರಂಭದಲ್ಲಿ ನೋಡಲ್ ಅಧಿಕಾರಿಯವರನ್ನು ಹಾಗೂ ಸಭೆಗೆ ಆಗಮಿಸಿದ ಸನ್ಮಾನ್ಯ ಶ್ರೀ. ಎನ್. ಎ. ಹ್ಯಾರೀಸ್, ಮಾನ್ಯ ಶಾಸಕರು ಶಾಂತಿನಗರ ವಿಧಾನ ಸಭಾ ಕ್ಷೇತ್ರ ರವರನ್ನು ಮತ್ತು ವಾರ್ಡ್ ಸಮಿತಿ ಸದಸ್ಯರನ್ನು ವಿವಿಧ ಇಲಾಖೆಯಿಂದ ಆಗಮಿಸಿದ್ದ ಅಧಿಕಾರಿಗಳನ್ನು ಮತ್ತು ಸಾರ್ವಜನಿಕರುಗಳಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಿದರು.

**ದಿನಾಂಕ: 26-11-2020 ರ ಸಭೆಯಲ್ಲಿ ಸಾರ್ವಜನಿಕರು ತಿಳಿಸಿದ ಸಮಸ್ಯೆಗಳನ್ನು ಪರಿಹರಿಸಲು ಕೈಗೊಂಡ ಕ್ರಮಗಳ ವಿವರ:**

| ಕ್ರ.ಸಂ | ಸಮಸ್ಯೆ | ಕೈಗೊಂಡ ಕ್ರಮ |
|---|---|---|
| 1 | ವಾರ್ಡಿನಲ್ಲಿ ಬೀದಿ ದೀಪಗಳ ನಿರ್ವಹಣೆ ಬಗ್ಗೆ. | ಸಮಸ್ಯೆ ಪರಿಹರಿಸಿರುವುದಾಗಿ ಮಂಜಪ್ಪ ರವರು ಸಭೆಗೆ ತಿಳಿಸಿದರು. |
| 2 | ಕುಡಿಯುವ ನೀರಿನ ಸಮಸ್ಯೆ ಕುರಿತು. | ಬಿ.ಡಬ್ಲ್ಯು.ಎಸ್.ಎಸ್.ಬಿ. ಇಲಾಖೆಯ ಅಧಿಕಾರಿಗಳು ಸಮಸ್ಯೆ ಬಗೆಹರಿಸಿರುವುದಾಗಿ ಸಭೆಗೆ ಮಾಹಿತಿ ನೀಡಿದರು. |
| 3 | ಬೆಸ್ಕಾಂ ಇಲಾಖೆಗೆ ಸಂಬಂಧಿಸಿದ ಕೆಲಸ ಕಾರ್ಯಗಳ ಕುರಿತು. | ಸಮಸ್ಯೆ ಪರಿಹರಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಲಾಗುತ್ತಿದೆ ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದರು. |
| 4 | ರಸ್ತೆ ಗುಂಡಿಗಳನ್ನು ಮುಚ್ಚುವ ಬಗ್ಗೆ. | ಮಳೆ ಸುರಿಯುತ್ತಿದ್ದ ಕಾರಣ ರಸ್ತೆ ಗುಂಡಿ ಮುಚ್ಚುವ ಕಾಮಗಾರಿ ನಿರ್ವಹಿಸಲು ಸಾಧ್ಯವಾಗಿರುವುದಿಲ್ಲವೆಂದು, ಮತ್ತು ಕೂಡಲೇ ಕಾಮಗಾರಿ ನಿರ್ವಹಿಸುವುದಾಗಿ ಸಹಾಯಕ ಅಭಿಯಂತರರು ತಿಳಿಸಿದರು. |
| 5 | ಪಾಲಿಕೆಯ ಅರಣ್ಯ ಇಲಾಖೆಯಿಂದ ಮರಗಳ ಟ್ರಿಮ್ಮಿಂಗ್ ಮಾಡುವ ಬಗ್ಗೆ. | ವಾರ್ಡಿನಲ್ಲಿ ಮರಗಳ ಟ್ರಿಮ್ಮಿಂಗ್ ಮಾಡುವ ಕಾರ್ಯವು ಪ್ರಗತಿಯಲ್ಲಿದ್ದು, ಆದಷ್ಟು ಬೇಗನೇ ಪೂರ್ಣಗೊಳಿಸುವುದು. |
| 6 | ಬೃಹತ್ ನೀರುಗಾಲುವೆ ಇಲಾಖೆಯಿಂದ ತಡೆಗೋಡೆ ನಿರ್ಮಾಣ ಮಾಡುವ ಬಗ್ಗೆ ಮತ್ತು ಚಾನಲ್ ರಸ್ತೆಯಲ್ಲಿ ಹಾಕಿರುವ ಹೂಳನ್ನು ತೆರವು ಮಾಡವು ಬಗ್ಗೆ. | ಬೃಹತ್ ನೀರುಗಾಲುವೆ ಇಲಾಖೆಯಿಂದ ತಡೆಗೋಡೆ ನಿರ್ಮಾಣ ಮಾಡುವ ಬಗ್ಗೆ ಪತ್ರ ಬರೆಯಲಾಗಿದೆ. |
| 7 | ರಸ್ತೆ ಮತ್ತು ಮೂಲಭೂತ ಸೌಕರ್ಯ ಇಲಾಖೆಯಿಂದ (Major roads) ವಾರ್ಡಿನಲ್ಲಿ ಕೈಗೊಂಡಿರುವ ಕಾಮಗಾರಿಗಳ ಕುರಿತು. | ರಸ್ತೆ ಮತ್ತು ಮೂಲಭೂತ ಸೌಕರ್ಯ ಇಲಾಖೆಗೆ ಪತ್ರ ಬರೆಯಲಾಗಿದೆ. |
| 8 | ವಿವೇಕನಗರ ಫರ್ದರ್ ಬಡಾವಣೆಯ 8ನೇ ಅಡ್ಡರಸ್ತೆಯ ಕಾಂಕ್ರಿಟ್ ಕಾಮಗಾರಿ ಕುರಿತು. | ಲಭ್ಯ ಅನುದಾನವನ್ನು ಉಪಯೋಗಿಸಿಕೊಂಡು ಕಾಮಗಾರಿ ನಿರ್ವಹಿಸುವದಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು ತಿಳಿಸಿರುತ್ತಾರೆ. |

ಇಂದಿನ ನಡೆದ ಸಭೆಯಲ್ಲಿ ಪ್ರಮುಖವಾಗಿ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.

1. **ವಾರ್ಡಿನಲ್ಲಿರುವ ಬೋರ್‌ವೆಲ್‌ಗಳ ಕುರಿತು ಮತ್ತು ವಾರ್ಡಿನಲ್ಲಿ ನೀರಿನ ಸಮಸ್ಯೆ.**
2. **ಸೊನ್ನೇನಹಳ್ಳಿ ಪ್ರದೇಶದಲ್ಲಿ ಕೆಲವು ಕಡೆ ಚರಂಡಿ ಮೇಲಿನ ಸ್ಲ್ಯಾಬ್‌ಗಳು ಒಡೆದು ಹೋಗಿರುತ್ತವೆ.**
3. **ವಾರ್ಡಿನಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಬಗ್ಗೆ.**
4. **ಸೊನ್ನೇನಹಳ್ಳಿ ಪ್ರದೇಶದಲ್ಲಿರುವ ಬಡವರಿಗೆ ಹಕ್ಕು ಪತ್ರ ವಿತರಿಸುವ ಬಗ್ಗೆ.**
5. **ವಿವೇಕನಗರ ಉದ್ಯಾನವನದಲ್ಲಿ ಅನಧಿಕೃತವಾಗಿ ಸ್ಥಾಪಿಸಿರುವ ಕುಡಿಯುವ ನೀರಿನ ಘಟಕವನ್ನು ತೆರವುಗೊಳಿಸುವ ಕುರಿತು.**
6. **ಉದ್ಯಾನವನಗಳಲ್ಲಿ Lights ಗಳಿಲ್ಲದಿರುವ ಬಗ್ಗೆ ಮತ್ತು ರಾತ್ರಿ ವೇಳೆಯಲ್ಲಿ ಇಲ್ಲಿ ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ.**
7. **ವಿದ್ಯುತ್ ಕಂಬಗಳಲ್ಲಿ ವೈರ್‌ಗಳು ನೇತಾಡುತ್ತಿರು ಬಗ್ಗೆ ಮತ್ತು ಹಳೆಯ ವಿದ್ಯುತ್ ಕಂಬಗಳನ್ನು ಬದಲಾಯಿಸುವ ಬಗ್ಗೆ.**
8. **ಶ್ರೀ. ಸುಬ್ರಮಣಿ. ಎಸ್ ಎಂಬುವವರು ನೀಡಿದ ಪತ್ರದ ಬಗ್ಗೆ.**
9. **ಟ್ವಿಸ್ಟೆಡ್ ವೈರ್‌ಗಳನ್ನು ಬದಲಾಯಿಸಿ ABC ಕೇಬಲ್‌ಗಳನ್ನು ಅಳವಡಿಸುವ ಕುರಿತು.**
10. **ವಿವೇಕಗರ ಫರ್ದರ್ ಎಕ್ಸ್‌ಟೆನ್ಷನ್‌ನ 2ನೇ ಮುಖ್ಯರಸ್ತೆ 2ನೇ ಅಡ್ಡರಸ್ತೆಯಲ್ಲಿ ಸ್ಯನಿಟರಿ ಪೈಪ್‌ಲೈನ್ ಅಳವಡಿಸುವ ಬಗ್ಗೆ ಮತ್ತು ಸೆಂಟ್ರಲ್ ಸ್ಟ್ರೀಟ್‌ನಲ್ಲಿ ಸ್ಯಾನಿಟರಿ ಪೈಪ್‌ಲೈನ್‌ನ್ನು ಬದಲಾಯಿಸುವ ಬಗ್ಗೆ.**

## ವಾರ್ಡ್ ಸಮಿತಿ ಸಭೆಯ ನಡಾವಳಿಗಳು

| ಕ್ರ. ಸಂ | ಚರ್ಚಿಸಿದ ವಿಷಯಗಳು | ತೆಗೆದುಕೊಳ್ಳಬೇಕಾದ ಕ್ರಮ | ಕ್ರಮಕೈಗೊಳ್ಳಬೇಕಾ ಅಧಿಕಾರಿಗಳ ವಿವರ |
|---|---|---|---|
| 1 | ಸಮಿತಿ ಸದಸ್ಯರು ಮಾತನಾಡಿ ವಾರ್ಡಿನಲ್ಲಿ ಹಲವಾರು ಬೋರ್‌ವೆಲ್‌ಗಳಿದ್ದರು ಸಾರ್ವಜನಿಕರಿಗೆ ನೀರಿನ ಸಮಸ್ಯೆ ಕಾಡುತ್ತಿರುತ್ತದೆ ಆದ್ದರಿಂದ ಈ ಸಮಸ್ಯೆ ಬಗೆಹರಿಸುವಂತೆ ಕೋರಿದರು. ಹಾಗೂ ವಾರ್ಡಿನ ಹಲವಾರು ಪ್ರದೇಶಗಳಲ್ಲಿ ನೀರು ಸರಬರಾಜು ಮಾಡುತ್ತಿದ್ದ ಸಮಯವನ್ನು ಕಡಿಮೆ ಮಾಡಿರುವುದರಿಂದ ಬಹಳ ತೊಂದರೆಯಾಗುತ್ತಿರುವುದಾಗಿ ತಿಳಿಸಿದರು. | ವಾರ್ಡಿನಲ್ಲಿರುವ ಕಾರ್ಯನಿರ್ವಹಿಸುತ್ತಿರುವ, ದುರಸ್ಥಿಗೊಂಡಿರುವ ಮತ್ತು ವಿದ್ಯುತ್ ಸಂಪರ್ಕ ಹೊಂದಿದ್ದು, ಉಪಯೋಗವಿಲ್ಲದಿರುವ ಬೋರ್‌ವೆಲ್‌ಗಳ ಕ್ರೃಡೀಕೃತ ಮಾಹಿತಿಯನ್ನು ಒದಗಿಸುವಂತೆ ಮತ್ತು ವಾರ್ಡಿನ ನೀರಿನ ಸಮಸ್ಯೆ ಪರಿಹರಿಸುವಂತೆ ಬಿ.ಡಬ್ಲ್ಯು.ಎಸ್.ಎಸ್.ಬಿ. ಇಲಾಖೆ ಅಧಿಕಾರಿಗಳಿಗೆ ಮಾನ್ಯ ಶಾಸಕರು ಸೂಚಿಸಿದರು. | ಶ್ರೀ. ಶ್ರೀನಿವಾಸ್<br>ಸಹಾಯಕ ಕಾರ್ಯಪಾಲಕ ಅಭಿಯಂತರರು,<br>ಬಿ.ಡಬ್ಲ್ಯು.ಎಸ್.ಎಸ್.ಬಿ |
| 2 | ಸಮಿತಿ ಸದಸ್ಯರಾದ ಥಾಮ ರವರು ಮಾತನಾಡಿ ಸೊನ್ನೇನಹಳ್ಳಿ ಪ್ರದೇಶದಲ್ಲಿ ಕೆಲವು ಕಡೆ ಚರಂಡಿ ಮೇಲಿನ ಸ್ಲ್ಯಾಬ್‌ಗಳು ಒಡೆದು ಹೋಗಿರುತ್ತವೆ, ಇವುಗಳನ್ನು ಸರಿಪಡಿಸಲು ಕೋರಿದರು. | ಈ ಬಗ್ಗೆ ಸ್ಥಳ ಪರಿಶೀಲನೆ ಮಾಡಿ, ಸ್ಲ್ಯಾಬ್‌ಗಳು ಒಡೆದು ಹೋಗಿರುವ ಕಡೆಗಳಲ್ಲಿ ಹೊಸದಾಗಿ ಸ್ಲ್ಯಾಬ್‌ಗಳನ್ನು ಹಾಕಿಸಲು ಕ್ರಮಕೈಗೊಳ್ಳಲಾಗುವುದು ಎಂದು ಸಹಾಯಕ ಕಾರ್ಯಪಾಕ ಅಭಿಯಂತರರು ತಿಳಿಸಿದರು. ಮತ್ತು ಮಾನ್ಯ ಶಾಸಕರು ಕೂಡಲೇ ಕ್ರಮಕೈಗೊಳ್ಳುವಂತೆ ನಿರ್ದೇಶಿಸಿದರು. | ಶ್ರೀ ಟಿ.ಡಿ. ಮಂಜುನಾಥ<br>ಸಹಾಯಕ ಕಾರ್ಯಪಾಲಕ ಅಭಿಯಂತರರು,<br>ಬಿ.ಬಿ.ಎಂ.ಪಿ. |
| 3 | ವನ್ನಾರಪೇಟೆ ವಾರ್ಡ್ ವ್ಯಾಪ್ತಿಯ ಹಲವು ಪ್ರದೇಶಗಳಲ್ಲಿ ಕಾನೂನು ಬಾಹಿರ ಚಟುವಟಿಕೆಗಳು ಹೆಚ್ಚಾಗುತ್ತಿರುತ್ತವೆ. ಮತ್ತು ಕೆ.ಬಿ.ರಸ್ತೆ, ನೀಲಸಂದ್ರ ಪ್ರದೇಶದಲ್ಲಿರುವ ಪೊಲೀಸ್ ಇಲಾಖೆಗೆ ಸೇರಿದ ಹಳೆಯ ಪೊಲೀಸ್ ಕ್ವಾಟ್ರಸ್ ಕಟ್ಟಡದಲ್ಲಿ ಅನೈತಿಕ ಚಟುವಟಿಕೆಗಳು ಹೆಚ್ಚಾಗಿ ನಡೆಯುತ್ತಿದು ಈ ಕಾರಣದಿಂದಾಗಿ ವಾರ್ಡಿನಲ್ಲಿ ಪೊಲೀಸ್ | ಈ ಬಗ್ಗೆ ಪೊಲೀಸ್ ಇಲಾಖೆಯವರು ಕೂಡಲೇ ಕ್ರಮಕೈಗೊಳ್ಳುವಂತೆ ಮತ್ತು ವಾರ್ಡಿನಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ಅಗತ್ಯ ಕ್ರಮಕೈಗೊಳ್ಳುವಂತೆ ಮಾನ್ಯ ಶಾಸಕರು ಪೊಲೀಸ್ ಇಲಾಖೆಯವರಿಗೆ ಸೂಚಿಸಿದರು. ಹಾಗೂ ಹಳೆಯ ಪೊಲೀಸ್ ಕ್ವಾಟ್ರಸ್ ಕಟ್ಟಡವನ್ನು ತೆರವುಗೊಳಿಸಲು ಪಾಲಿಕೆಯ | ಪೊಲೀಸ್ ಇಲಾಖೆ,<br>ವಿವೇಕನಗರ ಪೊಲೀಸ್ ಠಾಣೆ<br><br>ಶ್ರೀ ಟಿ.ಡಿ. ಮಂಜುನಾಥ<br>ಸಹಾಯಕ ಕಾರ್ಯಪಾಲಕ ಅಭಿಯಂತರರು,<br>ಬಿ.ಬಿ.ಎಂ.ಪಿ. |



Ulı2

| | | | |
|---|---|---|---|
| | ಬೀಟ್‌ಗಳನ್ನು ಹೆಚ್ಚಿಸುವಂತೆ ವಾರ್ಡ್ ಸಮಿತಿ ಸದಸ್ಯರು ಮತ್ತು ಸಾರ್ವಜನಿಕರು ಕೋರಿದರು. | ಇಂಜಿನಿಯರಿಂಗ್ ವಿಭಾಗದಿಂದ ಕ್ರಮಕೈಗೊಳ್ಳುವಂತೆ ಸೂಚಿಸಿರು. | |
| 4 | ವಾರ್ಡ್ ಸಮಿತಿ ಸದಸ್ಯರಾದ ಶಶಿ ರವರು ಮಾತನಾಡಿ ವಾರ್ಡಿನ ಸೊನ್ನೇನಹಳ್ಳೀ ಪ್ರದೇಶದಲ್ಲಿ ಹಲವಾರು ವರ್ಷಗಳಿಂದ ವಾಸಿಸುತ್ತಿರುವ ನಿವಾಸಿಗಳಿಗೆ ಇದುವರೆಗೂ ಹಕ್ಕು ಪತ್ರ ನೀಡಿರುವುದಿಲ್ಲ, ಆದ್ದರಿಂದ ದಯಮಾಡಿ ಹಕ್ಕು ಪತ್ರ ನೀಡಲು ಕ್ರಮಕೈಗೊಳ್ಳುವಂತೆ ಕೋರಿದರು. | ಈ ಬಗ್ಗೆ ಮಾನ್ಯ ಶಾಸಕರು ಪಾಲಿಕೆಯ ಕಂದಾಯ ವಿಭಾಗದ ಸಹಾಯಕ ಕಂದಾಯ ಅಧಿಕಾರಿಗಳಿಗೆ ಕೂಡಲೇ ಅಗತ್ಯ ಕ್ರಮಕೈಗೊಂಡು ಎಲ್ಲರಿಗೂ ಹಕ್ಕು ಪತ್ರವ ವಿತರಿಸುವಂತೆ ನಿರ್ದೇಶಿಸಿದರು. | ಶ್ರೀ ಚಂದ್ರಪ್ಪ ಕೆ ಬಿ<br>ಸಹಾಯಕ ಕಂದಾಯ ಅಧಿಕಾರಿಗಳು,<br>ದೊಮ್ಮಲೂರು ಉಪ ವಿಭಾಗ, ಬಿ.ಬಿ.ಎಂ.ಪಿ |
| 5 | ವಿವೇಕನಗರ ಉದ್ಯಾನವನದಲ್ಲಿ ಅನಧಿಕೃತವಾಗಿ ಸ್ಥಾಪಿಸಿರುವ ಕುಡಿಯುವ ನೀರಿನ ಘಟಕವನ್ನು ತೆರವುಗೊಳಿಸುವಂತೆ ಸಮಿತಿ ಸದಸ್ಯರಾದ ಶಶಿ ರವರು ಕೋರಿದರು. | ಈ ಬಗ್ಗೆ ಕೂಡಲೇ ಕ್ರಮಕೈಗೊಳ್ಳುವಂತೆ ಪಾಲಿಕೆಯ ತೋಟಗಾರಿಕಾ ವಿಭಾಗಕ್ಕೆ ಮತ್ತು ಇಂಜಿನಿಯರಿಂಗ್ ವಿಭಾಗಕ್ಕೆ ಮಾನ್ಯ ಶಾಸಕರು ಸೂಚನೆ ನೀಡಿದರು. | ಶ್ರೀ. ಸಂತೋಷ್<br>ತೋಟಗಾರಿಕಾ ಅಧೀಕ್ಷಕರು (ಪೂರ್ವ ವಲಯ),<br>ಬಿ.ಬಿ.ಎಂ.ಪಿ<br><br>ಶ್ರೀ ಟಿ.ಡಿ. ಮಂಜುನಾಥ<br>ಸಹಾಯಕ ಕಾರ್ಯಪಾಲಕ ಅಭಿಯಂತರರು,<br>ಬಿ.ಬಿ.ಎಂ.ಪಿ. |
| 6 | ವಾರ್ಡ್ ಸಮಿತಿ ಸದಸ್ಯರಾದ ಪ್ರಭಾಕರ್ ರವರು ವನ್ನಾರಪೇಟೆ ವಾರ್ಡಿನಲ್ಲಿರುವ ಹಲವಾರು ಉದ್ಯಾನವಗಳಲ್ಲಿ ಮತ್ತು ವಾರ್ಡ್ ಕಛೇರಿ ಹಿಂಭಾಗ ಇರುವಂತಹ Triangle park ನಲ್ಲಿ Lights ಗಳಲ್ಲಿರುವುದಿಲ್ಲ ಇದರಿಂದ ರಾತ್ರಿ ವೇಳೆಯಲ್ಲಿ ಇಲ್ಲಿ ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿರುತ್ತವೆಂದು ತಿಳಿಸಿ ಈ ಸಮಸ್ಯೆ ಪರಿಹರಿಸುವಂತೆ ಕೋರಿದರು. | ಮಾನ್ಯ ಶಾಸಕರು ಪಾಲಿಕೆ ವಿದ್ಯುತ್ ವಿಭಾಗದ ಕಿರಿಯ ಇಂಜಿನಿಯರ್ ಆದ ಶ್ರೀ ಮಂಜಪ್ಪ ರವರಿಗೆ ವಾರ್ಡಿನಲ್ಲಿರುವ ಎಲ್ಲಾ ಉದ್ಯಾನವನಗಳಲ್ಲಿ Lights ಗಳನ್ನು ಅಳವಡಿಸಲು ತುರ್ತಾಗಿ ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಿದರು. ಮತ್ತು ವಾರ್ಡಿನಲ್ಲಿ ಪೊಲೀಸ್ ಬೀಟ್‌ನ್ನು ಹೆಚ್ಚಿಸುವಂತೆ ಪೊಲೀಸ್ ಇಲಾಖೆಗೆ ಸೂಚನೆ ನೀಡಿದರು. | ಶ್ರೀ. ಸಂತೋಷ್<br>ತೋಟಗಾರಿಕಾ ಅಧೀಕ್ಷಕರು (ಪೂರ್ವ ವಲಯ),<br>ಬಿ.ಬಿ.ಎಂ.ಪಿ<br><br>ಶ್ರೀ. ಮಂಜಪ್ಪ<br>ಕಿರಿಯ ಅಭಿಯಂತರರು, ವಿದ್ಯುತ್ ವಿಭಾಗ<br>ಬಿಬಿಎಂಪಿ<br><br>ಪೊಲೀಸ್ ಇಲಾಖೆ |
| 6 | ವನ್ನಾರಪೇಟೆ ವಾರ್ಡ್ ವ್ಯಾಪ್ತಿಯಲ್ಲಿ ಹಲವಾರು ವಿದ್ಯುತ್ ಕಂಬಗಳಲ್ಲಿ ವೈರ್‌ಗಳು ನೇತಾಡುತ್ತಿರುತ್ತವೆ, ಇವುಗಳನ್ನು ಕೂಡಲೇ ತೆರವುಗೊಳಿಸುವಂತೆ ಮತ್ತು ವಾರ್ಡಿನಲ್ಲಿ ಇರುವ ಹಳೆಯ ವಿದ್ಯುತ್ ಕಂಬಗಳನ್ನು ತೆರವು ಮಾಡಿ ಹೊಸ ವಿದ್ಯುತ್ ಕಂಬಗಳನ್ನು ಅಳವಡಿಸುವಂತೆ ಸಾರ್ವಜನಿಕರು ಕೋರಿದರು. | ಮಾನ್ಯ ಶಾಸಕರು ಬೆಸ್ಕಾಂ ಇಲಾಖೆಯ ಶ್ರೀ. ನಾಗಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಕೂಡಲೇ ನೇತಾಡುತ್ತಿರುವ ವೈರ್‌ಗಳನ್ನು ತೆರವು ಮಾಡಲು ಮತ್ತು ಹಳೆಯ ಕಂಬಗಳನ್ನು ಬದಲಾಯಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ನಿರ್ದೇಶಿಸಿದರು. | ಶ್ರೀ. ನಾಗಪ್ಪ,<br>ಸಹಾಯಕ ಕಾರ್ಯಪಾಲಕ ಅಭಿಯಂತರರು<br>ಬೆಸ್ಕಾಂ |
| 7 | ಶ್ರೀ. ಸುಬ್ರಮಣಿ. ಎಸ್ ಎಂಬುವವರು ಮಾನ್ಯ ಶಾಸಕರಿಗೆ ಪತ್ರವನ್ನು ನೀಡಿ, ವನ್ನಾರಪೇಟೆ ವ್ಯಾಪ್ತಿಯ ಸಂಜೀವಪುರದ ಓಂ ಶಕ್ತಿ ದೇವಸ್ಥನದ ಹತ್ತಿರ ಅನುಪಯುಕ್ತ ಹಳೆಯ ಬೋರ್‌ವೆಲ್ ಇದ್ದು, ಇದು ಪೂರ್ಣ ಪ್ರಮಾಣದಲ್ಲಿ ದುರಸ್ಥಿಗೊಂಡಿದ್ದು ಇದರಿಂದ ಸಾರ್ವಜನಿಕರಿಗೆ ಯಾವುದೇ ಉಪಯೋಗವಾಗುತಿರುವುದಿಲ್ಲವಾದ್ದರಿಂದ ಈ ಪ್ರದೇಶದಲ್ಲಿ ಹೊಸದಾಗಿ ಬೋರ್‌ವೆಲ್ ಕೊರೆಸಿ ಇಲ್ಲಿನ ನಿವಾಸಿಗಳಿಗೆ ನೀರಿನ | ಮಾನ್ಯ ಶಾಸಕರು ಶ್ರೀ. ಸುಬ್ರಮಣ್ಯ. ಎಸ್ ರವರು ನೀಡಿರುವ ಪತ್ರವನ್ನು ನೋಡಲ್ ಅಧಿಕಾರಿಗಳಿಗೆ ನೀಡಿ, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಂದ ಸಮಸ್ಯೆಯನ್ನು ಬಗೆಹರಿಸುವಂತೆ ಸೂಚಿಸಿರುತ್ತಾರೆ. | ಶ್ರೀ. ಶ್ರೀನಿವಾಸ್<br>ಸಹಾಯಕ ಕಾರ್ಯಪಾಲಕ ಅಭಿಯಂತರರು,<br>ಬಿ.ಡಬ್ಲ್ಯು.ಎಸ್.ಎಸ್.ಬಿ<br><br>ಶ್ರೀ ಟಿ.ಡಿ. ಮಂಜುನಾಥ<br>ಸಹಾಯಕ ಕಾರ್ಯಪಾಲಕ ಅಭಿಯಂತರರು,<br>ಬಿ.ಬಿ.ಎಂ.ಪಿ. |

| | | | |
|---|---|---|---|
| | ಸಂಪರ್ಕ ದೊರಕಿಸಿಕೊಟ್ಟು ನೀರಿನ ಸಮಸ್ಯೆ ಪರಿಹರಿಸಬೇಕೆಂದು ಕೋರಿರುತ್ತಾರೆ ಮತ್ತು ಸಂಜೀವಪುರ ಪ್ರದೇಶದಲ್ಲಿ ಕಲುಷಿತಗೊಂಡ ಕಾವೇರಿ ನೀರು ಸರಬರಾಜು ಆಗುತ್ತಿರುವುದಾಗಿ ತಿಳಿಸಿ ಈ ಬಗ್ಗೆ ಸೂಕ್ತ ಕ್ರಮಕೈಗೊಂಡು ಸಾರ್ವಜನಿಕರಿಗೆ ಶುದ್ಧ ನೀರನ್ನು ಸರಬರಾಜು ಮಾಡುವಂತೆ ಕೋರಿರುತ್ತಾರೆ. | | |
| 8 | ಜಾಗೀರ್ ಅಹ್ಮದ್ ರವರು ಮಾತನಾಡಿ ವಾರ್ಡಿನಲ್ಲಿರುವ ಟ್ವಿಸ್ಟೆಡ್ ವೈರ್‌ಗಳನ್ನು ಬದಲಾಯಿಸಿ ABC ಕೇಬಲ್‌ಗಳನ್ನು ಅಳವಡಿಸುವಂತೆ ಕೋರಿದರು. | ಬೆಸ್ಕಾಂ ಇಲಾಖೆಯ ಅಧಿಕಾರಿಗಳ ಅಗತ್ಯ ಕ್ರಮಕೈಗೊಳ್ಳುವುದಾಗಿ ಸಭೆಗೆ ಮಾಹಿತಿ ನೀಡಿದರು. | ಶ್ರೀ. ನಾಗಪ್ಪ,<br>ಸಹಾಯಕ ಕಾರ್ಯಪಾಲಕ ಅಭಿಯಂತರರು<br>ಬೆಸ್ಕಾಂ |
| 10 | ವಿವೇಕನಗರ ಫರ್ದರ್ ಎಕ್ಸ್‌ಟೆನ್ಷನ್‌ನ 2ನೇ ಮುಖ್ಯರಸ್ತೆ 2ನೇ ಅಡ್ಡರಸ್ತೆಯಲ್ಲಿ ಸ್ಯನಿಟರಿ ಪೈಪ್‌ಲೈನ್ ಇರುವುದಿಲ್ಲ ಮತ್ತು ಸೆಂಟ್ರಲ್ ಸ್ಟ್ರೀಟ್‌ನಲ್ಲಿ ಸ್ಯಾನಿಟರಿ ಪೈಪ್‌ಲೈನ್‌ನ್ನು ಬದಲಾಯಿಸಬೇಕಾಗಿರುತ್ತದೆ ಎಂದು, ಮತ್ತು ಮುಖ್ಯರಸ್ತೆಯಲ್ಲಿರುವ ಬೋರ್‌ವೆಲ್ ದೊರಸ್ಥಿಗೊಳಿಸಲು ಸಾರ್ವಜನಿಕರು ಸಭೆಯಲ್ಲಿ ಮನವಿ ಮಾಡಿದರು. | ಮಾನ್ಯ ಶಾಸಕರು ಅಗತ್ಯ ಕ್ರಮಕೈಗೊಳ್ಳುವಂತೆ ಬಿ.ಡಬ್ಲ್ಯು.ಎಸ್.ಎಸ್.ಬಿ. ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶಿಸಿದರು. | ಶ್ರೀ. ಶ್ರೀನಿವಾಸ್<br>ಸಹಾಯಕ ಕಾರ್ಯಪಾಲಕ ಅಭಿಯಂತರರು,<br>ಬಿ.ಡಬ್ಲ್ಯು.ಎಸ್.ಎಸ್.ಬಿ |
| 11 | ಆಶಾ ನರ್ಸಿಂಗ್ ಹೋಂ, ಹಳೆ ಚರ್ಚ್ ಹತ್ತಿರ ಹೊಸದಾಗಿ ರಸ್ತೆ ಮಾಡುವಂತೆ ಸಾರ್ವಜನಿಕರು ಮನವಿ ಮಾಡಿದರು. | ಈ ಬಗ್ಗೆ ಅನುದಾನಗಳ ಲಭ್ಯತೆ ಬಗ್ಗೆ ಪರಿಶೀಲಿಸಿ ಕ್ರಮಕೈಗೊಳ್ಳುವುದಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು ತಿಳಿಸಿದರು | ಶ್ರೀ ಟಿ.ಡಿ. ಮಂಜುನಾಥ<br>ಸಹಾಯಕ ಕಾರ್ಯಪಾಲಕ ಅಭಿಯಂತರರು,<br>ಬಿ.ಬಿ.ಎಂ.ಪಿ. |

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2021-22ನೇ ಸಾಲಿನ ಬಜೆಟ್‌ನಲ್ಲಿ ಅನುದಾನ ಒದಗಿಸುವ ಸಂಬಂಧ ವಾರ್ಡ್ ವ್ಯಾಪ್ತಿಯಲ್ಲಿ ಎಲ್ಲೆಲ್ಲಿ ಸಾರ್ವಜನಿಕ ಶೌಚಾಲಯಗಳು ಮತ್ತು ಕಮ್ಯುನಿಟಿ ಶೌಚಾಲಯಗಳ (CT/PT) ಅವಶ್ಯಕತೆ ಇರುತ್ತದೆ ಎಂಬ ಪಟ್ಟಿಯನ್ನು ಮತ್ತು ವಾರ್ಡಿನಲ್ಲಿ ಅಭಿವೃದ್ಧಿಪಡಿಸಬೇಕಾಗಿರುವ ಪಾದಚಾರಿ ಮಾರ್ಗಗಳ (Footpath) ಪಟ್ಟಿಯನ್ನು ಸಲ್ಲಿಸುವಂತೆ ಸಭೆಯಲ್ಲಿದ್ದ ಸಾರ್ವಜನಿಕರಿಗೆ ಮತ್ತು ಅಧಿಕಾರಿಗಳಿಗೆ ನೋಡಲ್ ಅಧಿಕಾರಿಯವರು ಸೂಚಿಸಿದರು.**

ನೋಡಲ್ ಅಧಿಕಾರಿಯವರು ಸಭೆಗೆ ಹಾಜರಾಗಿದ್ದ ಮಾನ್ಯ ಶಾಸಕರಿಗೆ ಮತ್ತು ಸಮಿತಿಯ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

11/12/2020

**ನೋಡಲ್ ಅಧಿಕಾರಿಗಳು**
**ವಾರ್ಡ್ ಸಂಖ್ಯೆ: 115 ವನ್ನಾರಪೇಟೆ**
**ಬಿ.ಬಿ.ಎಂ.ಪಿ**

ಪ್ರತಿಯನ್ನು:

1. ಮಾನ್ಯ ಆಡಳಿತಗಾರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.

3. ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮಾನ್ಯ ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
6. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
7. **ಸದರಿ ಸಭೆಯ ನಡಾವಳಿ ಪ್ರತಿಯನ್ನು ಸಭೆಗೆ ಹಾಜರಾಗಿದ್ದ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ಕಳುಹಿಸಿಕೊಡುತ್ತಾ, ಸಭೆಯಲ್ಲಿ ಸಾರ್ವಜನಿಕರು ಮತ್ತು ವಾರ್ಡ್ ಸಮಿತಿ ಸದಸ್ಯರುಗಳು ಚರ್ಚಿಸಿದ ವಿಷಯದ ಬಗ್ಗೆ ಹಾಗೂ ಸಮಸ್ಯೆಗಳನ್ನು ಬಗೆಹರಿಸಲು ಕೈಗೊಂಡ ಕ್ರಮಗಳ ಸಂಪೂರ್ಣ ವಿವರವನ್ನು ಲಿಖಿತ ರೂಪದಲ್ಲಿ ಸದಸ್ಯ ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರ ಕಛೇರಿಗೆ ಸಲ್ಲಿಸಲು ಈ ಮೂಲಕ ಎಲ್ಲಾ ಇಲಾಖೆಯ ಅಧಿಕಾರಿಗಳಲ್ಲಿ ಕೋರಿದೆ.**
8. ಕಛೇರಿ ಪ್ರತಿ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಸಕಾಅ/ದೊ/ಪಿಆರ್/02/2020-21

ಸಹಾಯಕ ಅಭಿಯಂತರವರ ಕಛೇರಿ
ದೊಮ್ಮಲೂರು ಉಪ ವಿಭಾಗ
ವಾರ್ಡ್ ಕಛೇರಿ, ದೊಮ್ಮಲೂರು
ದಿನಾಂಕ: 16.12.2020

## ಸಭಾ ಸೂಚನಾ ಪತ್ರ

ವಿಷಯ: ವಾರ್ಡ್ ಸಂಖ್ಯೆ:115 ವನ್ನಾರಪೇಟೆ ವಾರ್ಡ್ ಸಮಿತಿ ಸಭೆಯನ್ನು ಏರ್ಪಡಿಸಿರುವ ಬಗ್ಗೆ.

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಆದೇಶದಂತೆ ವಾರ್ಡ್ ಸಂಖ್ಯೆ:115 ವನ್ನಾರಪೇಟೆ ವಾರ್ಡ್ ಸಮಿತಿ ಸಭೆಯನ್ನು ನೋಡೆಲ್ ಅಧಿಕಾರಿಗಳರವರ ಅಧ್ಯಕ್ಷತೆಯಲ್ಲಿ ದಿನಾಂಕ: 19-12-2020 (ಶನಿವಾರ) ಮಧ್ಯಾಹ್ನ 3-00 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಜಸ್ಮ ಭವನ, ಕೆ.ಆರ್. ರಸ್ತೆ, ಆಸ್ಟಿನ್ ಟೌನ್, ಬೆಂಗಳೂರು ಇಲ್ಲಿ ಏರ್ಪಡಿಸಲಾಗಿದ್ದು ತಾವುಗಳು ಸಾರ್ವಜನಿಕ ಕುಂದುಕೊರತೆಗಳನ್ನು ಚರ್ಚಿಸಲು ಈ ಸಭೆಗೆ ತಪ್ಪದೇ ಮಾಹಿತಿಯೊಂದಿಗೆ ಹಾಜರಾಗಲು ತಿಳಿಸಲಾಗಿದೆ.

ಸಭೆಯಲ್ಲಿ ಚರ್ಚಿಸುವ ವಿಷಯಗಳು: (ಅಜೆಂಡಾ)

01. ಕೋವಿಡ್ - 19 ಸಂಬಂಧ ಸೋಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ಮುಂಜಾಗ್ರತಾ ಕ್ರಮಗಳ ಬಗ್ಗೆ.
02. ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ.
03. ವಾರ್ಡ್‌ನಲ್ಲಿ ಘನ ತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ.
04. ವಾರ್ಡ್‌ನಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ.
05. ರಸ್ತೆ ಗುಂಡಿಗಳನ್ನು ಮುಚ್ಚುವ ಬಗ್ಗೆ.
06. ವಿದ್ಯುತ್ ಸರಬರಾಜು (ಬೆಸ್ಕಾಂಗೆ) ಸಂಬಂಧಿಸಿದ ವಿಷಯದ ಬಗ್ಗೆ.
07. ಇನ್ನಿತರೆ ವಿಷಯಗಳು ಅಧ್ಯಕ್ಷರ ಅಪ್ಪಣೆಯ ಮೇರೆಗೆ

**ನೋಡಲ್ ಅಧಿಕಾರಿ ರವರ ಆದೇಶದ ಮೇರೆಗೆ**

**ವಾರ್ಡ್ ಕಾರ್ಯದರ್ಶಿ ಸಹಾಯಕ ಅಭಿಯಂತರರು**
**ವಾರ್ಡ್ ಸಂಖ್ಯೆ:115 ವನ್ನಾರಪೇಟೆ**

ಪ್ರತಿಯನ್ನು,

08. ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ರವರ ಮಾಹಿತಿಗಾಗಿ.
09. ಆರೋಗ್ಯಾಧಿಕಾರಿಗಳು (ಪೂರ್ವ) ವಲಯ ಬಿಬಿಎಂಪಿ ರವರ ಮಾಹಿತಿಗಾಗಿ
10. ಸಹಾಯಕ ಕಂದಾಯ ಅಧಿಕಾರಿ (ದೊಮ್ಮಲೂರು) ಉಪ ವಿಭಾಗ, ರವರ ಮಾಹಿತಿಗಾಗಿ
11. ಕಲ್ಯಾಣ ಇಲಾಖೆ (ಪೂರ್ವ) ರವರ ಮಾಹಿತಿಗಾಗಿ
12. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ) ರವರ ಮಾಹಿತಿಗಾಗಿ
13. ಸಹಾಯಕ ಕಾರ್ಯಪಾಕ ಅಭಿಯಂತರರು (ಜಲ ಮಂಡಳಿ) ರವರ ಮಾಹಿತಿಗಾಗಿ
14. ಸಹಾಯಕ ಕಾರ್ಯಪಾಕ ಅಭಿಯಂತರರು (ವಿದ್ಯುತ್)( ಪೂರ್ವ) ಬಿಬಿಎಂಪಿ ರವರ ಮಾಹಿತಿಗಾಗಿ
15. ಠಾಣಾಧಿಕಾರಿಗಳು ಕಾನೂನು ಸುವ್ಯವಸ್ಥೆ/ಸಂಚಾರ, ಅಶೋಕನಗರ/ವಿವೇಕನಗರರವರ ಮಾಹಿತಿಗಾಗಿ